ಕ್ಷಣ ಕ್ಷಣದ ಸುದ್ದಿಗಾಗಿ ವಿಶ್ವವಾಣಿ timely ಆ್ಯಪ್ ಡೌನ್‌ಲೋಡ್ ಮಾಡಿ

## ಟ್ವೀಟು ಖಾರ

**ಅಮಿತ್ ಶಾ**
@AmitShah

ಲೋಕ ಕಲ್ಯಾಣಕ್ಕೋಸ್ಕರ ನಾವು ನಿರಂತರವಾಗಿ ಪ್ರಯಾಸ ಪಡಬೇಕಾಗಿದೆ. ಪ್ರತಿಯೊಬ್ಬರ ಆರ್ಥಿಕ, ಸಾಮಾಜಿಕ ಬೆಳವಣಿಗೆ ನಮ್ಮ ಗುರಿಯಾಗಿದೆ. ಆದ್ದರಿಂದ ಮೀಸಲಾತಿ ಮಸೂದೆ ಜಾರಿಗೊಳಿಸುತ್ತಿದ್ದೇವೆ.

**ಶಿವರಾಜ್ ಸಿಂಗ್ ಚೌಹಾಣ್**
@ChouhanShivraj

ಭೋಪಾಲ್‌ನ ಆರೇಡಿ ಗ್ರಾಮದ ಜೀವನ ಯಾದವ್ ಅವರು ಅಂತರಾಷ್ಟ್ರೀಯ ಕುಸ್ತಿ ಪಂದ್ಯದಲ್ಲಿ ಚಿನ್ನದ ಪದಕ ಜಯಿಸಿ, ರಾಜ್ಯ ಮತ್ತು ದೇಶಕ್ಕೆ ಕೀರ್ತಿ ತಂದಿದ್ದಾರೆ. ಇವರಿಗೆ ಅಭಿನಂದನೆಗಳು.



**ಎನ್. ಚಂದ್ರಬಾಬು ನಾಯ್ಡು**
@ncbn

ಆಂಧ್ರಪ್ರದೇಶ ರಾಜ್ಯವು ವರ್ಷದಿಂದ ವರ್ಷಕ್ಕೆ ಜಾಗತಿಕ ಮಟ್ಟದ ಬೃಹತ್ ಯೋಜನೆಗಳನ್ನು ಪಡೆದು ರಾಜ್ಯ ಅಭಿವೃದ್ಧಿ ಪಥದತ್ತ ಸಾಗುತ್ತಿದೆ. 'ಸಿಇಎಸ್' ಕಂಪನಿಯು ತಿರುಪತಿ ನಗರ ಯೋಜನೆಯನ್ನು ತಮ್ಮ ತೆಕ್ಕೆಗೆ ತೆಗೆದುಕೊಂಡು ಇನ್ನಷ್ಟು ಅಭಿವೃದ್ಧಿ ಮಾಡುತ್ತಿದೆ.

**ಗೌರವ್ ಪಾಂಡಿ**
@GauravPandhi

ದೆಹಲಿಯ ಮಾಜಿ ಮುಖ್ಯಮಂತ್ರಿ ಶೀಲಾ ದೀಕ್ಷಿತ್ ಅವರು ದೆಹಲಿ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಇವರ ನಾಯಕತ್ವದಲ್ಲಿ ಕಾಂಗ್ರೆಸ್ ಪಕ್ಷ ದೆಹಲಿಯಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸುತ್ತದೆ.!

**ಅನಿಮಾ ಸೋನ್‌ಕರ್**
@AnimaSonkar

ಭಾರತ ದೇಶದಲ್ಲಿರುವ ಅಪರೂಪದ ಸಾವಿರಾರು ದೇವಾಲಯಗಳನ್ನು ಮೊಘಲರು ನಾಶಗೊಳಿಸಿದರು. ಹಿಂದೂಗಳು ಎಷ್ಟು ಕರಾಳ ದಿನಗಳನ್ನು ಆಚರಿಸಬೇಕು.? ಉತ್ತರ 365 ದಿನಗಳಾಗಿವೆ. ಅಷ್ಟೇ.!

## ಇವತ್ತಿನ ರೇಟು

| | | |
|---|---|---|
| ಸೆನ್ಸೆಕ್ಸ್ | 36,106 | -106.41 |
| ನಿಫ್ಟಿ | 10,821 | -33.55 |

₹ ಮೌಲ್ಯ

| | |
|---|---|
| $ | 70.41 |
| € | 81.21 |
| £ | 89.66 |

### ಆಭರಣ

ಚಿನ್ನ

| | |
|---|---|
| ಬೆಂಗಳೂರು, 10 ಗ್ರಾಂಗೆ | |
| ಶುದ್ಧ ಚಿನ್ನ | 32,400 |
| ಒಡವೆ ಚಿನ್ನ | 30,520 |
| ಮುಂಬೈ, 10 ಗ್ರಾಂಗೆ | |
| ಶುದ್ಧ ಚಿನ್ನ | 32,420 |
| ಒಡವೆ ಚಿನ್ನ | 30,540 |

ಬೆಳ್ಳಿ

| | |
|---|---|
| ಬೆಂಗಳೂರು, ಪ್ರತಿ ಕೆಜಿಗೆ | |
| ಶುದ್ಧ ಬೆಳ್ಳಿ | 42,058 |
| ಮುಂಬೈ, ಪ್ರತಿ ಕೆಜಿಗೆ | |
| ಶುದ್ಧ ಬೆಳ್ಳಿ | 42,051 |

### ಕೋಳಿ/ಮೊಟ್ಟೆ

ಇವತ್ತಿನ ರೇಟ್

| | |
|---|---|
| 100ಕ್ಕೆ | 448 |
| ಸುಗುಣ ಚಿಕನ್ ಕೆ.ಜಿ. | 65 |
| ವೆಂಕೋಬ್ ಚಿಕನ್ ಕೆ.ಜಿ. | 71 |

### ರೇಷ್ಮೆ (ರಾಮನಗರ–ಕೆ.ಗೆ)

| | |
|---|---|
| ಬೈವೋಲ್ಟಿನ್ | 335-628 |
| ಮಿಶ್ರತಳಿ | 228-480 |

### ಏಲಕ್ಕಿ ಪ್ರತಿ ಕೆ.ಜಿ. (ಹಸಿರು)

| | |
|---|---|
| ಸಕಲೇಶಪುರ | 630 |
| ಮಡಿಕೇರಿ | 550 |

### ಅಡಕೆ ಶಿವಮೊಗ್ಗ

ಕ್ವಿಂಟಾಲ್‌ಗೆ

| | |
|---|---|
| ಗೊರಬಲು | 23,991 |
| ರಾಶಿ | 33,999 |
| ಸರಕು | 59,159 |

### ಎಪಿಎಂಸಿ

ಯಶವಂತಪುರ

| ಅಕ್ಕಿ – ಸೋನಾ ಮಸೂರಿ | |
|---|---|
| ದಪ್ಪ | 2,900 |
| ಐಆರ್–64 | 3.680 |
| ಮಧ್ಯಮ | 5,800 |
| ರಾಗಿ (ಉತ್ತಮ) | 3,333 |
| ರಾಗಿ(ಸ್ಥ) | 3000 |
| ಜೋಳ (ವಿಜಯಪುರ) | 2,800 |
| ಅಚ್ಚುಬೆಲ್ಲ | 4,385 |
| ಮುದ್ದೆಬೆಲ್ಲ | 4,200 |
| ಧನಿಯಾ (ಸ್ಥ) | 12,500 |
| ಬ್ಯಾಡಗಿ ಮೆಣಸು. | 18,000 |
| ಗುಂಟೂರು ಮೆ. | 11,500 |
| ಬಿಳಿ ಈರುಳ್ಳಿ | 1,600 |
| ಸಣ್ಣ ಈರುಳ್ಳಿ (ಸ್ಥ) | 1,500 |
| ಬೆಳ್ಳುಳ್ಳಿ | 3,200 |
| ಹೆಸರುಕಾಳು (ಸ್ಥ) | 5,151 |
| ಬಟಾಣಿ (ಹಸಿ) | 7000 |
| ಗೋಧಿ (ಸ್ಥ) | 3,500 |
| ಕಡಲೆಬೇಳೆ | 6,500 |
| ಅವರೆಬೇಳೆ | 5000 |
| ತೊಗರಿಬೇಳೆ | 7,800 |
| ಹೆಸರುಬೇಳೆ | 7,700 |

### ಕಾಫಿಧಾರಣೆ

| ಚಿಕ್ಕಮಗಳೂರು | 50ಕೆಜಿ |
|---|---|
| ಅರೇಬಿಕಾ ಪಾರ್ಚ್‌ಮೆಂಟ್ | 8,600 |
| ಅರೇಬಿಕಾ ಚೆರ್ರಿ | 3,850 |
| ರೋಬೊಸ್ಟ ಪಾರ್ಚ್‌ಮೆಂಟ್ | 5650 |
| ರೋಬೊಸ್ಟ ಚೆರ್ರಿ | 3125 |

### ಹಾಪ್‌ಕಾಮ್ಸ್

| | |
|---|---|
| ಟೊಮೆಟೊ | 54 |
| ಆಲೂಗೆಡ್ಡೆ | 28 |
| ಕ್ಯಾರೆಟ್ (ನಾಟಿ) | 42 |
| ಹುರುಳಿಕಾಯಿ | 35 |
| ಕ್ಯಾಬೇಜ್ | 22 |
| ಹೂಕೋಸು | 34 |
| ಹಸಿಮೆಣಸಿನಕಾಯಿ | 56 |
| ಕೊತ್ತಂಬರಿಸೊಪ್ಪು | 98(ಕಟ್ಟು) |
| ಮೆಂತೆಸೊಪ್ಪು | 68(ಕಟ್ಟು) |
| ಬೆಂಡೆಕಾಯಿ | 55 |
| ಸೌತೆಕಾಯಿ | 26 |
| ಅವರೆಕಾಯಿ | 25 |
| ಅಣಬೆ | 200 |
| ಕುಂಬಳಕಾಯಿ | 20 |
| ಸ್ವೀಟ್ ಕಾರ್ನ್ | 48 |
| ಪಚ್ಚಬಾಳೆ | 26 |
| ಏಲಕ್ಕಿ ಬಾಳೆ | 45 |
| ಕಿತ್ತಳೆ | 65 |
| ಮೊಸಂಬಿ | 87 |
| ಕಲ್ಲಂಗಡಿ | 18 |
| ಕರಬೂಜ | 54 |
| ಪಪ್ಪಾಯಿ | 22 |
| ದ್ರಾಕ್ಷಿ | 52 |
| ಬೀಟ್ ರೂಟ್ | 38 |

### ನೂತನ ಪೀಠ ರಚನೆಯಾಗಬೇಕಿದೆ | ವಿನಾಕಾರಣ ವಿಳಂಬ ವಿಎಚ್‌ಪಿ ಆಕ್ಷೇಪ

# ಅಯೋಧ್ಯೆ ವಿಚಾರಣೆ ಜ.29ಕ್ಕೆ ಮುಂದೂಡಿಕೆ

**ದೆಹಲಿ:** ಅಯೋಧ್ಯೆ ವಿವಾದಿತ ಭೂಮಿ ಹಂಚಿಕೆ ಪ್ರಕರಣದ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ಜನವರಿ 29ಕ್ಕೆ ಮುಂದೂಡಿದೆ. ಐವರು ಸದಸ್ಯರ ಸಾಂವಿಧಾನಿಕ ಪೀಠದಲ್ಲಿ ಒಬ್ಬರಾಗಿದ್ದ ನ್ಯಾ. ಉದಯ್ ಲಲಿತ್ ವಿಚಾರಣೆಯಿಂದ ಹಿಂದೆ ಸರಿದ ಹಿನ್ನೆಲೆಯಲ್ಲಿ ವಿಚಾರಣೆಯನ್ನು 29ಕ್ಕೆ ನಿಗದಿಪಡಿಸಲಾಗಿದೆ.

ಈ ಪ್ರಕರಣದ ವಿಚಾರಣೆಯನ್ನು ನಡೆಸಲು ನೂತನ ಪೀಠ ರಚಿಸಿ ಜ.29ರಿಂದ ವಿಚಾರಣೆ ನಡೆಸಲಾಗುವುದು ಎಂದು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ರಂಜನ್ ಗೋಗೊಯ್ ತಿಳಿಸಿದ್ದಾರೆ.

ಮುಖ್ಯ ನ್ಯಾಯಮೂರ್ತಿ ರಂಜನ್ ಗೋಗೊಯ್ ನೇತೃತ್ವದ ಸಾಂವಿಧಾನಿಕ ಪೀಠದಲ್ಲಿ ನ್ಯಾಯಮೂರ್ತಿಗಳಾದ ಡಿ.ವೈ.ಚಂದ್ರಚೂಡ್, ಎಸ್.ಎ.ಬೊಬ್ಡೆ, ಎಸ್.ವಿ. ರಮಣ ಹಾಗೂ ಉದಯ್ ಲಲಿತ್ ಅವರಿದ್ದರು.1994ರಲ್ಲಿ ಉತ್ತರ ಪ್ರದೇಶದ ಮಾಜಿ ಮುಖ್ಯಮಂತ್ರಿ ಕಲ್ಯಾಣ್ ಸಿಂಗ್ ಅವರ ಪರ ಉದಯ್ ಲಲಿತ್ ವಾದ ಮಂಡಿಸಿದ್ದರು. ಈ ವಿಚಾರವಾಗಿ ವಕೀಲ ರಾಜೀವ್ ಧವನ್ ಆಕ್ಷೇಪ ವ್ಯಕ್ತಪಡಿಸಿದ ಕಾರಣ ನ್ಯಾ.ಉದಯ್ ಲಲಿತ್ ವಿಚಾರಣೆಯಿಂದ ಹಿಂದೆ ಸರಿದಿದ್ದಾರೆ.

ಇನ್ನು ಈ ವಿಚಾರದಲ್ಲಿ ಹಿಂದೂ ಸಂಘಟನೆಗಳ ಪರ ವಕೀಲರಾದ ಹರೀಶ್ ಸಾಳ್ವೆ ಕೂಡ ರಾಜೀವ್ ಧವನ್ ಅವರ ವಾದಕ್ಕೆ ಬೆಂಬಲ ಸೂಚಿಸಿದರು.

2010ರಲ್ಲಿ ಅಲಹಾಬಾದ್ ಹೈಕೋರ್ಟ್ ತೀರ್ಪು ನೀಡಿ ವಿವಾದಿತ ಭೂಪ್ರದೇಶವನ್ನು ನಿರ್ಮೋಹಿ ಅಖಾಡ, ರಾಮ ಲಲ್ಲಾ ಮತ್ತು ಸುನ್ನಿ ವಕ್ಫ್ ಮಂಡಳಿಗೆ ಹಂಚಿಕೆ ಮಾಡಿತ್ತು. ಇದನ್ನು ಪ್ರಶ್ನಿಸಿ ಹಿಂದೂ ಮತ್ತು ಮುಸ್ಲಿಂ ಧಾರ್ಮಿಕ ಸಂಘಟನೆಗಳು ಸುಪ್ರೀಂ ಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಿದ್ದವು.

**ಪ್ರತಿಪಕ್ಷಗಳ ಕುತಂತ್ರ; ವಿಎಚ್‌ಪಿ ಕಿಡಿ:** ಅಯೋಧ್ಯೆ ಪ್ರಕರಣದ ವಿಚಾರಣೆಯನ್ನು ಮುಂದೂಡಲು ಸಾಧ್ಯವಿರುವ ಎಲ್ಲ ಪ್ರಯತ್ನಗಳನ್ನು ಪ್ರತಿ ಪಕ್ಷಗಳು ಮಾಡುತ್ತಿವೆ. ನಮ್ಮ ಆತಂಕದಂತೆ ಪ್ರತಿಪಕ್ಷಗಳು ವಿನಾಕಾರಣ ಕ್ಷುಲ್ಲಕ ವಿಚಾರಗಳನ್ನು ಎತ್ತಿ ನ್ಯಾಯಾಲಯ ವಿಚಾರಣೆ ಮುಂದೂಡುವಂತೆ ಮಾಡುತ್ತಿರುವುದು ಸ್ಪಷ್ಟವಾಗಿ ಕಂಡು ಬರುತ್ತಿದೆ ಎಂದು ವಿಎಚ್‌ಪಿ ಅಂತಾರಾಷ್ಟ್ರೀಯ ಕಾರ್ಯಾಧ್ಯಕ್ಷ ಅಲೋಕ್ ಕುಮಾರ್ ಆರೋಪ ಮಾಡಿದ್ದಾರೆ.

ನ್ಯಾ.ಲಲಿತ್ ಅವರು ರಾಮ ಜನ್ಮ ಭೂಮಿ ವಿಚಾರವಾಗಿ ಯಾವುದೇ ಹಂತದಲ್ಲೂ ನ್ಯಾಯಾಲಯದಲ್ಲಿ ವಕಾಲತ್ತು ವಹಿಸಿಲ್ಲ. ವಿಚಾರಣೆ ಅಥವಾ ಮೇಲ್ಮನವಿ ಸಂದರ್ಭದಲ್ಲಿ ಅವರು ಈ ಪ್ರಕರಣದಲ್ಲಿ ಭಾಗಿಯಾಗಿಲ್ಲ. 1997ರಲ್ಲಿ ಕಲ್ಯಾಣ್ ಸಿಂಗ್ ಅವರ ನ್ಯಾಯಾಂಗ ನಿಂದನೆ ಪ್ರಕರಣದಲ್ಲಿ ಮಾತ್ರ ವಕಾಲತು ವಹಿಸಿದ್ದರಿಂದ ಆಕ್ಷೇಪ ಎತ್ತಿರುವುದರ ಹಿಂದೆ ವಿಚಾರಣೆಯನ್ನು ವಿಳಂಬ ಮಾಡುವ ಉದ್ದೇಶವಿರುವುದು ಸ್ಪಷ್ಟವಾಗಿದೆ ಎಂದಿದ್ದಾರೆ.

ನ್ಯಾಯಾಲಯ ಈ ವಿಚಾರಣೆಯನ್ನು ತಡ ಮಾಡದೇ ನಡೆಸಬೇಕು. ಜ.10ರಿಂದ ಸುದೀರ್ಘ ಅವಧಿಗೆ ಮುಂದೂಡಲಾಗಿದೆ. ಹಿಂದೂಗಳು ತಾಳ್ಮೆ ಹೊಂದಿದ್ದಾರೆ. ಆದರೂ ನ್ಯಾಯಾಂಗ ಈ ವಿಚಾರದಲ್ಲಿ ತಡ ಮಾಡದೇ ವಿಚಾರಣೆ ನಡೆಸಬೇಕು ಎಂದು ಹೇಳಿದ್ದಾರೆ.

### 30 ಸಾವಿರ ಪುಟ ಸಾಕ್ಷ್ಯ ಪರಿಶೀಲನೆ

**ನೂತನವಾಗಿ ರಚನೆಯಾಗಲಿರುವ ಸುಪ್ರೀಂ ಕೋರ್ಟ್ ಸಂವಿಧಾನಿಕ ಪೀಠದ ನ್ಯಾಯಾಧೀಶರು ಮತ್ತೆ ಪ್ರಕರಣದಲ್ಲಿ ಸಲ್ಲಿಕೆಯಾಗಿರುವ 30 ಸಾವಿರ ಪುಟಗಳ ಸಾಕ್ಷ್ಯಾಧಾರಗಳನ್ನು ಪರಿಶೀಲಿಸಬೇಕು. ನ್ಯಾಯ ಪೀಠದ ಮುಂದೆ 88 ಸಾಕ್ಷಿದಾರರು, 13,886 ಪುಟಗಳ ಸಾಕ್ಷಿ, 257 ಪ್ರಕರಣಕ್ಕೆ ಸಂಬಂಧಿಸಿದ ದಾಖಲೆಗಳು ಹಾಗೂ ವಿಡಿಯೋ ಟೇಪ್‌ಗಳನ್ನು ಪರಿಶೀಲಿಸಲಿದೆ.**

### ಭಾಷಾಂತರ ದಾಖಲೆಗಳ ಪರಿಶೀಲನೆ ಸವಾಲು

**ನೂತನ ಸಂವಿಧಾನ ಪೀಠವು ಪ್ರಕರಣದ ವಿಚಾರಣೆ ವೇಳೆ ಹಿಂದಿ, ಅವಾಧಿ, ಗುರ್ಮುಖಿ, ಪರ್ಷಿಯನ್ ಮತ್ತು ಉರ್ದು ಭಾಷೆಗಳಲ್ಲಿರುವ ಸಾಕ್ಷಿ ಹಾಗೂ ದಾಖಲೆಗಳ ಅಸ್ಪಷ್ಟ ಭಾಷಾಂತರ ಪ್ರತಿಗಳನ್ನು ಪರಿಶೀಲಿಸಬೇಕಿದೆ. ಈ ಹಿಂದೆ ಇಂಗ್ಲೀಷ್ ಭಾಷೆಗೆ ಭಾಷಾಂತರಗೊಂಡಿದ್ದ ದಾಖಲೆಗಳು ಅಸ್ಪಷ್ಟವಾಗಿವೆ ಎಂದು ನ್ಯಾಯಾಲಯದ ಪೀಠ ಆಕ್ಷೇಪ ವ್ಯಕ್ತಪಡಿಸಿತ್ತು.**

# ಮಹಿಳಾ ಆಯೋಗದಿಂದ ರಾಹುಲ್‌ಗೆ ನೋಟಿಸ್

**ದೆಹಲಿ:** ಪ್ರಧಾನಿ ನರೇಂದ್ರ ಮೋದಿ ಅವರು ಹೆದರಿ ತಮ್ಮ ರಕ್ಷಣೆಗಾಗಿ ಮಹಿಳೆಯ ಆಸರೆ ಪಡೆದಿದ್ದಾರೆ ಎಂದು ಟೀಕೆ ಮಾಡಿದ್ದ ಕಾಂಗ್ರೆಸ್ ಅಧ್ಯಕ್ಷ ರಾಹುಲ್ ಗಾಂಧಿಗೆ ರಾಷ್ಟ್ರೀಯ ಮಹಿಳಾ ಆಯೋಗ ನೋಟಿಸ್ ಜಾರಿ ಮಾಡಿದೆ.

ರಾಹುಲ್ ಅವರು ತಮ್ಮ ಹೇಳಿಕೆಯಿಂದ ರಕ್ಷಣಾ ಸಚಿವೆ ನಿರ್ಮಲಾ ಸೀತಾರಾಮನ್ ಅವರಿಗೆ ಅಪಮಾನ ಮಾಡಿದ್ದಾರೆ ಎಂದು ಆರೋಪ ಕೇಳಿಬಂದಿರುವ ಹಿನ್ನೆಲೆಯಲ್ಲಿ ಮಹಿಳಾ ಆಯೋಗದ ಅಧ್ಯಕ್ಷೆ ರೇಖಾ ಶರ್ಮಾ ನೋಟಿಸ್ ಜಾರಿಗೊಳಿಸಿದ್ದಾರೆ.

ರಫೇಲ್ ವಿಚಾರವಾಗಿ ಲೋಕಸಭೆಯಲ್ಲಿ ಪ್ರತಿಪಕ್ಷಗಳ ಪ್ರಶ್ನೆಗಳಿಗೆ ಉತ್ತರಿಸುವಂತೆ ರಾಹುಲ್ ಗಾಂಧಿ ಪ್ರಧಾನಿ ನರೇಂದ್ರ ಮೋದಿ ಗೆ ಸವಾಲು ಹಾಕಿದ್ದರು. ಆದರೆ ಪ್ರಧಾನಿ ನರೇಂದ್ರ ಮೋದಿ ಪಂಜಾಬ್ ಪ್ರವಾಸ ಕೈಗೊಂಡಿದ್ದರಿಂದ ಅವರ ಪರವಾಗಿ ರಕ್ಷಣಾ ಸಚಿವೆ ನಿರ್ಮಲಾ ಸೀತಾರಾಮನ್ ಉತ್ತರಿಸಿ ಪ್ರತಿಪಕ್ಷಗಳ ಆರೋಪಗಳಿಗೆ ತಿರುಗೇಟು ನೀಡಿದ್ದರು.

ಇದನ್ನೇ ಟೀಕಾಸ್ತ್ರವನ್ನಾಗಿ ಬಳಸಿಕೊಂಡ ರಾಹುಲ್ ಗಾಂಧಿ ಬುಧವಾರ ಜೈಪುರದ ಸಮಾವೇಶದಲ್ಲಿ 56 ಇಂಚಿನ ಎದೆ ಹೊಂದಿರುವ ಮೋದಿ ಅವರು ಸಂಸತ್ತಿನಲ್ಲಿ ಪ್ರತಿಪಕ್ಷಗಳನ್ನು ಎದುರಿಸಲಾಗದೇ ಓಡಿ ಹೋಗಿ ಮಹಿಳೆಯ ಬಳಿ 'ನನ್ನನ್ನು ರಕ್ಷಿಸಿ. ನನ್ನನ್ನು ನಾನು ಸಮರ್ಥಿಸಿಕೊಳ್ಳಲು ಸಾಧ್ಯವಿಲ್ಲ. ಹೀಗಾಗಿ ನೀವೇ ನನ್ನನ್ನು ಕಾಪಾಡಿ ಎಂದು ಕೇಳಿಕೊಂಡಿದ್ದಾರೆ.

ಆಗ ಆ ಮಹಿಳೆ ಸಂಸತ್ತಿನಲ್ಲಿ ಎರಡೂವರೆ ತಾಸು ಮಾತನಾಡಿದರೂ ಮೋದಿಯನ್ನು ರಕ್ಷಿಸಲು ಸಾಧ್ಯವಾಗಲಿಲ್ಲ. ನಾನು ನೇರವಾಗಿ ಹೌದು ಅಥವಾ ಇಲ್ಲ ಎಂಬ ಉತ್ತರವನ್ನಷ್ಟೇ ಕೇಳಿದ್ದೆ. ಆದರೆ ಅದನ್ನೂ ಅವರಿಂದ ಕೊಡಲು ಸಾಧ್ಯವಾಗಲಿಲ್ಲ' ಎಂದು ರಾಹುಲ್ ಟೀಕೆ ಮಾಡಿದ್ದರು.

# ಜಿಎಸ್‌ಟಿ ಮಿತಿ ₹20 ಲಕ್ಷದಿಂದ ₹40 ಲಕ್ಷಕ್ಕೆ ಏರಿಕೆ

**ದೆಹಲಿ:** ಸಣ್ಣ ಪ್ರಮಾಣದ ವಹಿವಾಟು ನಡೆಸುವವರಿಗೆ ನೆರವಾಗುವ ನಿಟ್ಟಿನಲ್ಲಿ ಜಿಎಸ್‌ಟಿ ಮಂಡಳಿ ಹಲವಾರು ವಿನಾಯಿತಿಗಳನ್ನು ಘೋಷಿಸಿದೆ. ಸರಕು ಮತ್ತು ಸೇವಾ ತೆರಿಗೆ(ಜಿಎಸ್‌ಟಿ) ಮಂಡಳಿಯು ತೆರಿಗೆ ವಿನಾಯಿತಿ ಮಿತಿಯನ್ನು ದುಪ್ಪಟ್ಟುಗೊಳಿಸಿದೆ. ರಾಜಿ ತೆರಿಗೆ ವ್ಯವಸ್ಥೆಗೆ ಸೇರ್ಪಡೆಗೊಳ್ಳಲು ನಿಗದಿ ಮಾಡಿದ್ದ ವಹಿವಾಟಿನ ಗರಿಷ್ಠ ಮಿತಿಯನ್ನೂ ಹೆಚ್ಚಿಸಿದೆ. ದೆಹಲಿಯಲ್ಲಿ ವಿತ್ತ ಸಚಿವ ಅರುಣ್ ಜೇಟ್ಲಿ ಅವರ ಅಧ್ಯಕ್ಷತೆಯಲ್ಲಿ ನಡೆದ 32 ನೇ ಜಿಎಸ್‌ಟಿ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ. ಇಂದು ಕೈಗೊಂಡ ನಿರ್ಧಾರಗಳಿಂದ ಶೇ. 60ರಷ್ಟು ನೊಂದಾಯಿತ ವಹಿವಾಟುದಾರರು ಜಿಎಸ್‌ಟಿ ವ್ಯಾಪ್ತಿಯಿಂದ ಹೊರಗುಳಿಯಲಿದ್ದಾರೆ. ತೆರಿಗೆ ವರಮಾನ ಸಂಗ್ರಹದ ಮೇಲೆ ಇದು ತುಂಬ ಕಡಿಮೆ ಪರಿಣಾಮ ಬೀರಲಿದೆ ಎಂದು ಸಚಿವ ಜೇಟ್ಲಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

### ಸಭೆಯ ಮುಖ್ಯಾಂಶಗಳು

- **ಜಿಎಸ್‌ಟಿಗೆ ನೋಂದಣಿ ಮಾಡಿಕೊಳ್ಳುವವರ ವಾರ್ಷಿಕ ವಹಿವಾಟಿನ ವಿನಾಯಿತಿ ಮಿತಿಯನ್ನು ಸದ್ಯದ ₹ 20 ಲಕ್ಷದಿಂದ ₹ 40 ಲಕ್ಷಕ್ಕೆ ಏರಿಕೆ. ಇನ್ನು ಮುಂದೆ 40 ಲಕ್ಷದ ವರೆಗೆ ವಹಿವಾಟು ನಡೆಸುವವರಿಗೆ ಜಿಎಸ್‌ಟಿಯಿಂದ ವಿನಾಯಿತಿ.**
- **ಈಶಾನ್ಯ ರಾಜ್ಯಗಳಿಗೆ ಈ ಮಿತಿ ₹ 20 ಲಕ್ಷಕ್ಕೆ ನಿಗದಿ.**
- **ವಾರ್ಷಿಕ ವಹಿವಾಟು ಆಧರಿಸಿ ತೆರಿಗೆ ಪಾವತಿಸುವ ವ್ಯವಸ್ಥೆ ಇರುವ ಕಂಪೋಸಿಷನ್ ಸ್ಕೀಮ್ (ರಾಜಿ ತೆರಿಗೆ) ಒಪ್ಪಿಕೊಳ್ಳುವವರ ವಹಿವಾಟಿನ ಗರಿಷ್ಠ ಮಿತಿಯನ್ನು ₹ 1 ಕೋಟಿಯಿಂದ ₹ 1.5 ಕೋಟಿಗೆ ಹೆಚ್ಚಳ. ಇದು ಈ ವರ್ಷದ ಏಪ್ರಿಲ್ 1 ರಿಂದ ಜಾರಿ.**
- **ಈ ಕ್ರಮಗಳು ಕಿರು, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳಿಗೆ (ಎಂಎಸ್‌ಎಂಇ) ಹೆಚ್ಚು ಪ್ರಯೋಜನಕಾರಿ.**
- **'ರಾಜಿ ತೆರಿಗೆ'ಗೆ ಒಳಪಟ್ಟವರು ವರ್ಷಕ್ಕೆ ಒಂದು ಬಾರಿ ತೆರಿಗೆ ಲೆಕ್ಕಪತ್ರ (ರಿಟರ್ನ್) ಸಲ್ಲಿಸಿದರೆ ಸಾಕು. ಪ್ರತಿ ಮೂರು ತಿಂಗಳಿಗೊಮ್ಮೆ ಮಾತ್ರ ತೆರಿಗೆ ಪಾವತಿಸಲು ಅವಕಾಶ.**
- **ಸರಕು ಮತ್ತು ಸೇವಾ ತೆರಿಗೆ ವ್ಯಾಪ್ತಿಗೆ ರಿಯಲ್ ಎಸ್ಟೇಟ್ ಮತ್ತು ಲಾಟರಿಗಳನ್ನು ಸೇರ್ಪಡೆ ಮಾಡುವ ಬಗ್ಗೆ ನಿರ್ಧಾರ ಕೈಗೊಳ್ಳಲು ಏಳು ಸದಸ್ಯರ ಸಮಿತಿ ರಚನೆ.**
- **ಅತಿವೃಷ್ಟಿಯಿಂದ ಸಂಕಷ್ಟಕ್ಕೀಡಾಗಿರುವ ಕೇರಳವು ರಾಜ್ಯದೊಳಗಿನ ಮಾರಾಟಕ್ಕೆ ಎರಡು ವರ್ಷಗಳವರೆಗೆ ಶೇ 1ರಷ್ಟು ವಿಪತ್ತು ಸೆಸ್ ವಿಧಿಸುವುದಕ್ಕೆ ಅನುಮತಿ.**

# ಶೇ.10 ಮೀಸಲು ಪ್ರಶ್ನಿಸಿ ಸುಪ್ರೀಂ ಮೊರೆ

**ದೆಹಲಿ:** ಮೇಲ್ವರ್ಗದವರಿಗೆ ಉದ್ಯೋಗ ಮತ್ತು ಶಿಕ್ಷಣದಲ್ಲಿ ಶೇ.10ರಷ್ಟು ಮೀಸಲಾತಿ ಕಲ್ಪಿಸಿರುವುದನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಲಾಗಿದೆ. ಯೂತ್ ಫಾರ್ ಈಕ್ವಾಲಿಟಿ ಸ್ವಯಂಸೇವಾ ಸಂಸ್ಥೆ ಮತ್ತು ಕೌಶಲ್ ಕಾಂತ್ ಮಿಶ್ರಾ ಎಂಬುವವರು ಈ ಮಸೂದೆಯನ್ನು ರದ್ದುಗೊಳಿಸುವಂತೆ ಆಗ್ರಹಿಸಿ ಅರ್ಜಿ ಸಲ್ಲಿಸಿದ್ದಾರೆ. ಕೇವಲ ಆರ್ಥಿಕ ಅರ್ಹತೆಯೊಂದೇ ಮೀಸಲಾತಿ ಪಡೆಯಲು ಮಾನದಂಡವಾಗಬಾರದು ಎಂದು ಅವರು ವಾದಿಸಿದ್ದಾರೆ. ಆರ್ಥಿಕ ಪರಿಸ್ಥಿತಿಯ ಆಧಾರದ ಮೇಲೆ ಸಾಮಾನ್ಯ ವರ್ಗಗಳಿಗೆ ಮೀಸಲಾತಿ ನೀಡಿರುವುದು ಸಂವಿಧಾನದ ಮೂಲಭೂತ ಆಶಯಗಳಿಗೆ ಧಕ್ಕೆ ಉಂಟಾಗುತ್ತದೆ ಮತ್ತು ಮೀಸಲಾತಿಯು ಶೇ.50ನ್ನು ಮೀರಬಾರದೆಂಬ ಮಿತಿಯನ್ನು ಉಲ್ಲಂಘಿಸುತ್ತದೆ ಎಂದೂ ವಾದಿಸಿದ್ದಾರೆ. ಆರ್ಥಿಕವಾಗಿ ಹಿಂದುಳಿದಿರುವ ಮೇಲ್ಜಾತಿಗಳಿಗೆ ಶಿಕ್ಷಣ ಮತ್ತು ಉದ್ಯೋಗದಲ್ಲಿ ಶೇ.10ರಷ್ಟು ಮೀಸಲಾತಿ ಕಲ್ಪಿಸುವ ಮಸೂದೆಯನ್ನು ಬುಧವಾರ ರಾಜ್ಯಸಭೆ ಅಂಗೀಕರಿಸಿತ್ತು.

# ಲಾಲು ಜಾಮೀನು ಅರ್ಜಿ ತಿರಸ್ಕಾರ

**ರಾಂಚಿ:** ಬಹು ಕೋಟಿ ಮೇವು ಹಗರಣದ ಮೂರು ಪ್ರಕರಣಗಳಿಗೆ ಸಂಬಂಧಿಸಿದಂತೆ ಆರ್‌ಜೆಡಿ ಮುಖಂಡ ಮಾಜಿ ಮುಖ್ಯಮಂತ್ರಿ ಲಾಲು ಪ್ರಸಾದ್ ಯಾದವ್ ಸಲ್ಲಿಸಿದ್ದ ಜಾಮೀಜು ಅರ್ಜಿಯನ್ನು ಜಾರ್ಖಂಡ್ ಹೈಕೋರ್ಟ್ ಗುರುವಾರ ತಿರಸ್ಕರಿಸಿದೆ. ಮೇವು ಹಗಣರದಲ್ಲಿ ಈಗಾಗಲೇ ಜೈಲು ಶಿಕ್ಷೆ ಅನುಭವಿಸುತ್ತಿರುವ ಲಾಲು ಪ್ರಸಾದ್ ಅವರ ಇತರ ಪ್ರಕರಣಗಳಿಗೆ ಸಂಬಂಧಿಸಿದ ಜಾಮೀನು ಅರ್ಜಿಯನ್ನು ನ್ಯಾಯಮೂರ್ತಿ ಅಪರೇಶ್ ಕುಮಾರ್ ಸಿಂಗ್ ತಿರಸ್ಕರಿಸಿದ್ದಾರೆ ಎಂದು ಸಿಬಿಐ ವಕೀಲ ರಾಜೀವ್ ಸಿನ್ಹಾ ತಿಳಿಸಿದ್ದಾರೆ.

# ಕೇಜ್ರಿವಾಲ್ ಭೇಟಿ ಮಾಡಿದ ಪ್ರಕಾಶ್ ರೈ

**ದೆಹಲಿ:** ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಬೆಂಗಳೂರು ಕೇಂದ್ರ ಲೋಕಸಭಾ ಕ್ಷೇತ್ರದಿಂದ ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸುವುದಾಗಿ ಹೇಳಿಕೆ ನೀಡಿದ್ದ ನಟ ಪ್ರಕಾಶ್ ರೈ, ಗುರುವಾರ ದೆಹಲಿಯಲ್ಲಿ ಆಪ್ ಮುಖಂಡ, ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರೀವಾಲ್ ಅವರನ್ನು ಭೇಟಿ ಮಾಡಿ ಮಾತುಕತೆ ನಡೆಸಿದ್ದಾರೆ. ಅವಕಾಶ ಸಿಕ್ಕಾಗಲೆಲ್ಲಾ ಬಿಜೆಪಿ ನೇತೃತ್ವದ ಕೇಂದ್ರ ಸರಕಾರದ ರೈ ಟೀಕಾ ಪ್ರಹಾರ ಮುಂದುವರಿಸುತ್ತಲೇ ಇದ್ದಾರೆ.

ಪ್ರಕಾಶ್ ರಾಜ್ ಅವರಂತಹವರು ಸಂಸತ್ತಿಗೆ ಪ್ರವೇಶ ಪಡೆಯಬೇಕು. ಸ್ವತಂತ್ರ ಅಭ್ಯರ್ಥಿಯಾಗಿ ಕಣಕ್ಕಿಳಿಯುವ ನಿಮ್ಮ ನಿರ್ಧಾರವನ್ನು ಆಪ್ ಸ್ವಾಗತಿಸುತ್ತದೆ ಮತ್ತು ಬೆಂಬಲಿಸುತ್ತದೆ. ಸಂಸತ್ತಿನಲ್ಲಿ ನಿಮ್ಮ ಧ್ವನಿಯ ಅಗತ್ಯವಿದೆ' ಕೇಜ್ರಿವಾಲ್ ಟ್ವಿಟರ್‌ನಲ್ಲಿ ಬರೆದುಕೊಂಡಿದ್ದಾರೆ. ತಮ್ಮನ್ನು ಬೆಂಬಲಿಸಿದ್ದಕ್ಕಾಗಿ ಸಿಎಂ ಕೇಜ್ರಿವಾಲ್ ಮತ್ತು ಆಪ್ ಪಕ್ಷಕ್ಕೆ ಪ್ರಕಾಶ್ ರೈ ಕೃತಜ್ಞತೆ ಸಲ್ಲಿಸಿದ್ದಾರೆ.

# ಮೋದಿ ವಿರುದ್ಧ ಗುಡುಗಿದ ರಾಹುಲ್

**ದೆಹಲಿ:** ರಫೇಲ್ ಯುದ್ಧ ವಿಮಾನ ಖರೀದಿ ಒಪ್ಪಂದ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಬಿಐ ಮುಖ್ಯಸ್ಥ ಅಲೋಕ್ ವರ್ಮಾ ಅವರನ್ನು ವಜಾಗೊಳಿಸಲು ಪ್ರಧಾನಿ ನರೇಂದ್ರ ಮೋದಿ ಆತುರ ಹೊಂದಿದ್ದಾರೆ ಎಂದು ಕಾಂಗ್ರೆಸ್ ಅಧ್ಯಕ್ಷ ರಾಹುಲ್ ಗಾಂಧಿ ಆರೋಪಿಸಿದ್ದಾರೆ. ಅಲೋಕ್ ವರ್ಮಾ ಅವರನ್ನು ಕಡ್ಡಾಯ ರಜೆಯ ಮೇಲೆ ಕಳುಹಿಸಿದ್ದ ಕೇಂದ್ರ ಸರಕಾರದ ಕ್ರಮವನ್ನು ಸುಪ್ರೀಂ ಕೋರ್ಟ್ ಮಂಗಳವಾರ ವಜಾಗೊಳಿಸಿತ್ತು. ವರ್ಮಾ ಅವರು ತಮ್ಮ ಕಚೇರಿ ಪ್ರವೇಶಿಸಬಹುದು, ಆದರೆ ಯಾವುದೇ ಪ್ರಮುಖ ನಿರ್ಧಾರಗಳನ್ನು ಕೈಗೊಳ್ಳಬಾರದು ಎಂದು ನ್ಯಾಯಾಲಯ ಸೂಚಿಸಿತ್ತು. ರಫೇಲ್ ಪ್ರಕರಣದಲ್ಲಿ ಪ್ರಧಾನಿ ಮೋದಿ ಅವರನ್ನು ಯಾರೊಬ್ಬರೂ ರಕ್ಷಿಸಲು ಸಾಧ್ಯವಿಲ್ಲ ಎಂದು ರಾಹುಲ್ ಗುಡುಗಿದ್ದರು. ಇದೀಗ ಗುರುವಾರ ಟ್ವಿಟ್ಟರ್ ಮೂಲಕ ಎರಡು ಪ್ರಶ್ನೆಗಳನ್ನು ಕೇಳಿರುವ ರಾಹುಲ್ ಮೋದಿ ಕುರಿತು ವ್ಯಂಗ್ಯವಾಡಿದ್ದಾರೆ.

### ರಾಹುಲ್ ಪ್ರಶ್ನೆಗಳು

1. **ಸಿಬಿಐ ಮುಖ್ಯಸ್ಥರನ್ನು ವಜಾಗೊಳಿಸಲು ಪ್ರಧಾನಿಗಳಿಗೆ ಆತುರ ಏಕೆ?**
2. **ಆಯ್ಕೆ ಸಮಿತಿ ಮುಂದೆ ತಮ್ಮ ವಾದವನ್ನು ಮಂಡಿಸಲು ಸಿಬಿಐ ಮುಖ್ಯಸ್ಥರಿಗೆ ಏಕೆ ಅವಕಾಶ ನೀಡುತ್ತಿಲ್ಲ?**

**ಉತ್ತರ: ರಫೇಲ್**

# ಸೇನೆಯಲ್ಲಿ ಸಲಿಂಗ ಕಾಮಕ್ಕೆ ಅವಕಾಶವಿಲ್ಲ

**ದೆಹಲಿ:** ಭಾರತೀಯ ಸೇನೆಯಲ್ಲಿ ಸಲಿಂಗಕಾಮಕ್ಕೆ ಅವಕಾಶ ಮಾಡಿಕೊಳ್ಳುವುದಿಲ್ಲ' ಎಂದು ಸೇನಾ ಮುಖ್ಯಸ್ಥ ಬಿಪಿನ್ ರಾವತ್ ಹೇಳಿದ್ದಾರೆ. ಸಮ್ಮತಿಯ ಸಲಿಂಗಕಾಮ ಅಪರಾಧ ಅಲ್ಲ ಎಂಬ ಸುಪ್ರೀಂ ಕೋರ್ಟ್ ತೀರ್ಪನ್ನು ಕುರಿತು ಅವರು ಪ್ರತಿಕ್ರಿಯಿಸಿದ್ದಾರೆ. ಭಾರತೀಯ ಸೇನೆ ಸಲಿಂಗಕಾಮ ಕುರಿತು ತನ್ನದೇ ಆದ ಕಾನೂನು ಹೊಂದಿದೆ' ಎಂದರು. ಗುರುವಾರ ಸುದ್ದಿಗೋಷ್ಠಿಯಲ್ಲಿ ಬಿಪಿನ್ ರಾವತ್ ಮಾತನಾಡಿದರು.

ನಾವು ದೇಶದ ಕಾನೂನನ್ನು ಮೀರುವಂತಿಲ್ಲ. ಆದರೆ, ಭಾರತೀಯ ಸೇನೆಗೆ ಸೇರುತ್ತಿದ್ದಂತೆ ನೀವು ಅನುಭವಿಸುತ್ತಿರುವ ಕೆಲವು ಹಕ್ಕುಗಳು ಮತ್ತು ಅವಕಾಶಗಳಲ್ಲಿ ಇಲ್ಲವಾಗುತ್ತವೆ. ಕೆಲವು ಕಾನೂನುಗಳು ಭಿನ್ನವಾಗಿರುತ್ತವೆ' ಎಂದರು.

ನಿಸರ್ಗದ ನಿಯಮಕ್ಕೆ ವಿರುದ್ಧವಾದ ಲೈಂಗಿಕ ಸಂಪರ್ಕ ಅಪರಾಧ' ಎನ್ನುವ ಭಾರತೀಯ ದಂಡ ಸಂಹಿತೆಯ (ಐಪಿಸಿ) 377ನೇ ವಿಧಿಯನ್ನು ಸುಪ್ರಿಂಕೋರ್ಟ್‌ನ ಐವರು ನ್ಯಾಯಮೂರ್ತಿಗಳ ಪೀಠವು 2018ರ ಸೆಪ್ಟೆಂಬರ್‌ನಲ್ಲಿ ಅಪರಾಧ ಮುಕ್ತಗೊಳಿಸಿತ್ತು. ಸೆ.6ರಂದು ನೀಡಿದ ತೀರ್ಪಿನಲ್ಲಿ ಸಲಿಂಗಕಾಮವನ್ನು ಅಪರಾಧ ಎಂದು ಪರಿಗಣಿಸುವ ಭಾರತೀಯ ದಂಡಸಂಹಿತೆ (ಐಪಿಸಿ) ಸೆಕ್ಷನ್ 377 ಸಂವಿಧಾನದ 14ನೇ ವಿಧಿಯನ್ನು ಉಲ್ಲಂಘಿಸುತ್ತದೆ. ಸಲಿಂಗಿಗಳು, ದ್ವಿಲಿಂಗಿಗಳು ಅಥವಾ ಲಿಂಗಪರಿವರ್ತನೆ ಮಾಡಿಕೊಂಡ (ಎಲ್‌ಜಿಬಿಟಿಕ್ಯು) ಸಮುದಾಯದವರು ಎಲ್ಲ ನಾಗರೀಕರು ಹೊಂದಿರುವಂತೆ ಸಮಾನ ಹಕ್ಕುಗಳನ್ನು ಹೊಂದಿರುತ್ತಾರೆ' ಎಂದು ಹೇಳಿದೆ. ವಸಾಹತು ಆಳ್ವಿಕೆ ಕಾಲದಲ್ಲಿ ರಚನೆಯಾದ ಭಾರತೀಯ ದಂಡ ಸಂಹಿತೆಯ 497ನೇ ಸೆಕ್ಷನ್ ಅನ್ನು ರದ್ದು ಮಾಡುವ ಮೂಲಕ ವ್ಯಭಿಚಾರವು ಅಪರಾಧ ಅಲ್ಲ ಎಂದು ಸುಪ್ರೀಂ ಕೋರ್ಟ್‌ನ ಪಂಚ ನ್ಯಾಯಮೂರ್ತಿಗಳ ಪೀಠ ತಿಳಿಸಿತ್ತು. 'ಶಿಸ್ತುಬದ್ಧ ಸೇನೆಯಲ್ಲಿ ಇದಕ್ಕೂ ಅನುಮತಿ ಇಲ್ಲ' ಎಂದು ಸ್ಪಷ್ಟಪಡಿಸಿದರು.

**ಮಾತುಕತೆಗೆ ಸಿದ್ಧ:** ಜಮ್ಮು ಮತ್ತು ಕಾಶ್ಮೀರದಲ್ಲಿ ನಡೆಯುತ್ತಿರುವ ಹಿಂಸಾಚಾರಕ್ಕೆ ಅಂತ್ಯ ಹಾಡಿ ಶಾಂತಿ ಸ್ಥಾಪನೆಗಾಗಿ ಅಲ್ಲಿನ ಎಲ್ಲರ ಜತೆಯೂ ಮಾತುಕತೆ ನಡೆಸಲು ಸೇನೆ ಸಿದ್ಧವಿದೆ' ಎಂದು ಬಿಪಿನ್ ರಾವತ್ ತಿಳಿಸಿದ್ದಾರೆ. ಭಾರತದೊಳಗೆ ನುಸುಳಲು ಗಡಿ ನಿಯಂತ್ರಣ ರೇಖೆಯುದ್ದಕ್ಕೂ ಸುಮಾರು 300 ಭಯೋತ್ಪಾದಕರು ಕಾಯುತ್ತಿದ್ದಾರೆ' ಎಂಬ ಮಾಹಿತಿಯನ್ನು ಬಿಚ್ಚಿಟ್ಟರು.

ಕಣಿವೆ ರಾಜ್ಯದಲ್ಲಿ ಪರಿಸ್ಥಿತಿಯನ್ನು ನಿಯಂತ್ರಣಕ್ಕೆ ತರಲು ಭದ್ರತಾ ಪಡೆ ವಿವಿಧ ರೀತಿಯ ಕಾರ್ಯತಂತ್ರಗಳನ್ನು ಪ್ರಯೋಗಿಸುತ್ತಿದೆ. ಶಾಂತ ಮತ್ತು ಕಠಿಣ ಮಾರ್ಗಗಳೆರಡನ್ನೂ ನಾವು ಅಳವಡಿಸಿಕೊಳ್ಳುತ್ತಿದ್ದೇವೆ. ಹಿಂಸೆಯನ್ನು ಬಿಟ್ಟು ಮುಖ್ಯವಾಹಿನಿ ಬರುವ ಅವಕಾಶವನ್ನು ಉಗ್ರರಿಗೆ ನೀಡುತ್ತಿದ್ದೇವೆ. ಅವರು ಈ ಅವಕಾಶವನ್ನು ಬಳಸಿಕೊಂಡರೆ ರಾಜ್ಯದ ಜನರಿಗೆ ಹೆಚ್ಚು ಅನುಕೂಲವಾಗಲಿದೆ ಎಂದರು.

ಜಮ್ಮು ಮತ್ತು ಕಾಶ್ಮೀರದಲ್ಲಿ ಪ್ರತ್ಯೇಕವಾದಿಗಳೂ ಹಿಂಸೆಯನ್ನು ನಿಲ್ಲಿಸದಿದ್ದರೆ ಸೇನೆ ಕಠಿಣ =ನಿಲುವು ತಾಳಬೇಕಾಗುತ್ತದೆ ಎಂದು ಎಚ್ಚರಿಸಿದ ಅವರು, ಈ ಬಗ್ಗೆ ನಮ್ಮ ನಿಲುವು ಸ್ಪಷ್ಟವಾಗಿದೆ. ರಂಜಾನ್ ಸಂದರ್ಭದಲ್ಲಿ ಶಸ್ತ್ರಾಸ್ತ್ರ ತ್ಯಜಿಸಲು ಪ್ರತ್ಯೇಕವಾದಿಗಳಿಗೆ ಅವಕಾಶ ನೀಡಿದ್ದೇವೆ. ಒಂದು ವೇಳೆ ಯಾರಾದರೂ ಬಂದೂಕು ಕೈಗೆತ್ತಿಕೊಂಡರೆ ನಾವು ಕಠಿಣ ಕ್ರಮ ಕೈಗೊಳ್ಳುತ್ತೇವೆ' ಎಂದರು.

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಮೈಸೂರು
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ
ಟೆಂಡರ್ ಅಧಿಸೂಚನೆ ಸಂಖ್ಯೆ: 24/2018–19 ದಿನಾಂಕ: 09.01.2019

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ನಜರ್‌ಬಾದ್, ಮೈಸೂರು – 570010 ರವರು ಕೆ.ಡಬ್ಲ್ಯು–1ರ ರೀತ್ಯ, ವಿವಿಧ ಲೆಕ್ಕ ಶೀರ್ಷಿಕೆಗಳಡಿಯಲ್ಲಿ ಒಟ್ಟು 6 ಕಾಮಗಾರಿಗಳಿದ್ದು, ಇವುಗಳಲ್ಲಿ ಟೆಂಡರ್‌ಗಿಟ್ಟ ಕನಿಷ್ಠ ಮೊತ್ತ ರೂ.10.00 ಲಕ್ಷಗಳು, ಗರಿಷ್ಠ ಮೊತ್ತ ರೂ.17.00 ಲಕ್ಷಗಳು ಮತ್ತು ಇ.ಎಂ.ಡಿ. ಮೊತ್ತ ಕನಿಷ್ಠ ರೂ.0.125 ಲಕ್ಷಗಳು, ಗರಿಷ್ಠ ರೂ.0.43 ಲಕ್ಷಗಳು. ಈ ಕಾಮಗಾರಿಗಳಿಗೆ ಐಟಂವಾರು ಟೆಂಡರನ್ನು "ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್"ನಲ್ಲಿನ ಷರತ್ತುಗಳಿಗನುಗುಣವಾಗಿ ಕರೆಯಲಾಗಿದ್ದು, ಇ–ಪ್ರೊಕ್ಯೂರ್‌ಮೆಂಟ್" ಮೂಲಕ ನೋಂದಾಯಿತ ಗುತ್ತಿಗೆದಾರರಿಂದ ಬಿಡ್ಡನ್ನು ಆಹ್ವಾನಿಸಲಾಗಿದೆ. ಸದರಿ ಟೆಂಡರ್‌ಗೆ ಸಂಬಂಧಿಸಿದ ಮಾಹಿತಿಗಳು ಈ ಕೆಳಕಂಡಂತಿರುತ್ತದೆ.
ಟೆಂಡರ್‌ಗೆ ಸಂಬಂಧಿಸಿದ ಮಾಹಿತಿಗಳನ್ನು ಕಛೇರಿ ವೇಳೆಯಲ್ಲಿ ಈ ದಿನಾಂಕದೊಳಗೆ ಪಡೆಯಬಹುದಾಗಿದೆ: 21.01.2019, ಭರ್ತಿ ಮಾಡಿದ ಟೆಂಡರ್ ದಾಖಲೆಗಳು ಮತ್ತು ಬಿಡ್ಡನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಸಲ್ಲಿಸಲು ಕಡೆಯ ದಿನಾಂಕ: 22.01.2019, 5.00 ಗಂಟೆ. ಬಿಡ್ ತೆರೆಯುವ ದಿನಾಂಕ: 24.01.2019 ರಂದು ಬೆಳಿಗ್ಗೆ 11.00 ಗಂಟೆ. ಟೆಂಡರ್ ದಾಖಲಾತಿಗಳನ್ನು ವೆಬ್‌ಸೈಟ್ www.eproc.karnataka.gov.in ರಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು ಹೆಚ್ಚಿನ ಮಾಹಿತಿಯನ್ನು ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದು.
ವಿ.ಸೂ.: ಸದರಿ ಕಾಮಗಾರಿಗಳ ಟೆಂಡರ್‌ಗಳನ್ನು ಮುಂದೂಡುವ ಅಥವಾ ತಿರಸ್ಕರಿಸುವ ಹಕ್ಕನ್ನು ಹಾಗೂ ಯಾವುದೇ ಬಿಡ್ಡನ್ನು ತಿರಸ್ಕರಿಸುವ ಹಕ್ಕನ್ನು ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಮೈಸೂರು ಇವರಿಗೆ ಕಾಯ್ದಿರಿಸಲಾಗಿದೆ. ಹಾಗೂ ಈ ಪ್ರಕಟಣೆಗೆ ಸಂಬಂಧಿಸಿದಂತೆ, ಯಾವುದೇ ತಿದ್ದುಪಡಿಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.
**ಸಹಿ/– ಕಾರ್ಯಪಾಲಕ ಇಂಜಿನಿಯರ್, ಸನೀ ಮತ್ತು ಅಂ.ಅ.ವಿಭಾಗ, ಮೈಸೂರು.**
DIPR/DD/MYS/MCA/858

ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ
ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ
ಮಂಡ್ಯ ವಿಭಾಗ, ಮಂಡ್ಯ
ನಂ: 32/6192–200/2018–19 ದಿನಾಂಕ: 04–01–2019
ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲ್ಲೂಕಿನ ರಸ್ತೆ ಅಭಿವೃದ್ಧಿ / ನಿರ್ಮಾಣ ಕಾಮಗಾರಿಗೆ ಅಲ್ಪಾವಧಿ ಟೆಂಡರ್ ಪ್ರಕಟಣೆ

ಐಟಂವಾರು ದರದ ಟೆಂಡರ್‌ನ್ನು ಕೆಳಗೆ ಕಾಣಿಸಿದ ಕಾಮಗಾರಿಗಾಗಿ ಮೂರನೇ ದರ್ಜೆ ಮೇಲ್ಪಟ್ಟ ಗುತ್ತಿಗೆದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ KW-4 ರ ರೀತಿ ಎರಡು ಲಕೋಟೆ ಪದ್ಧತಿಯಲ್ಲಿ ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://www.eproc.karnataka.gov.in ಮುಖಾಂತರ ಕಾಮಗಾರಿಗಳ ಟೆಂಡರ್‌ಗಾಗಿ ಭಾಗವಹಿಸಬಹುದು. ಟೆಂಡರ್ ಪೂರ್ವಭಾವಿ ಸಭೆಯನ್ನು ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ, ಲೋಕೋಪಯೋಗಿ ಇಲಾಖೆ, ವಿಭಾಗ ಮಂಡ್ಯದಲ್ಲಿ ದಿನಾಂಕ: 09–01–2019 ರಂದು ಬೆಳಿಗ್ಗೆ 11–00 ಗಂಟೆಗೆ ಕರೆಯಲಾಗಿದೆ. ಟೆಂಡರ್ ದಾಖಲಾತಿಗಳನ್ನು ದಿನಾಂಕ: 05–01–2019 ರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಟೆಂಡರ್ ವಿಚಾರಣೆ ದಿನಾಂಕ: 11–01–2019 ಸಂಜೆ 4.30 ಗಂಟೆವರೆಗೆ, ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 14–01–2019 ಸಂಜೆ 4.30 ಗಂಟೆವರೆಗೆ. ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 16–01–2019 ಬೆಳಿಗ್ಗೆ 11.00 ಗಂಟೆ ನಂತರ, ಆರ್ಥಿಕ ಬಿಡ್ ದಿನಾಂಕ: 18–01–2019 ಬೆಳಿಗ್ಗೆ 11.00 ಗಂಟೆಗೆ ಅಥವಾ ನಂತರದ ಕೆಲಸದ ದಿನಗಳು. ಟೆಂಡರ್ ಪ್ರಕ್ರಿಯೆ ಬೆಲೆ ಇ–ಪೋರ್ಟಲ್ ರಂತೆ. **ಕಾಲಮಿತಿ:** ಮಳೆಗಾಲ ಸೇರಿ 4 ತಿಂಗಳು. **ಕಾಮಗಾರಿಯ ಹೆಸರು:** 1) ಮಳವಳ್ಳಿ ತಾಲ್ಲೂಕು ಮಂಡ್ಯ ಗುತ್ತಲು ಮುತ್ತತ್ತಿ ಜಿಲ್ಲಾ ಮುಖ್ಯ ರಸ್ತೆಯ ಸರಪಳಿ: 40.800 ರಿಂದ 41.200 ಕಿ.ಮೀ. & 43.670 ರಿಂದ 43.940 ಕಿ.ಮೀ ವರೆಗೆ ರಸ್ತೆ ಅಭಿವೃದ್ಧಿ ಕಾಮಗಾರಿ ಇ.ನಂ. 84513 ಟೆಂಡರ್ ಗಿಟ್ಟ ಮೊತ್ತ ರೂ. 132.11 ಲಕ್ಷ. ಇ.ಎಂ.ಡಿ. ಮೊತ್ತ ಇ–ಪೋರ್ಟಲ್‌ರಂತೆ ಹೆಚ್ಚಿನ ಮಾಹಿತಿಯನ್ನು ಸದರಿ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದು.

ಸಹಿ/–
DIPR/MND/RO 20/18-19/oysters ಕಾ.ಇಂ., ಲೋ.ಬಂ., ಒ.ಜ.ಇ., ವಿಭಾಗ, ಮಂಡ್ಯ

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ದಿಮೆ)
ಕಾರ್ಯನಿರ್ವಾಹಕ ಅಭಿಯಂತರರ ಕಾರ್ಯಾಲಯ, ಕೃಭಾಜನಿನಿ,
ಆಣೆಕಟ್ಟು ವಿಭಾಗ, ಆಲಮಟ್ಟಿ. ತಾ:ಬ.ಬಾಗೇವಾಡಿ, ಜಿ:ವಿಜಯಪುರ.
ದೂರವಾಣಿ:08426–281027.ಇಮೇಲ್:dam_division@rediffmail.com
ಸಂ:ಕೃಭಾಜನಿನಿ/ಪಿಬಿ–4/ಟೆಂಡರ್/2018–19/2804 ದಿನಾಂಕ:08.01.2019
ಅಲ್ಪಾವಧಿ ಸಂಕ್ಷಿಪ್ತ ಟೆಂಡರ್ ಪ್ರಕಟಣೆ

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕೃಭಾಜನಿನಿ. ಬೆಂಗಳೂರು, ಇವರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ. ಆಣೆಕಟ್ಟು ವಿಭಾಗ ಆಲಮಟ್ಟಿ. ತಾ: ಬ.ಬಾಗೇವಾಡಿ ಇವರು ಅರ್ಹ ಗುತ್ತಿಗೆದಾರರಿಗೆ (1) **Indent No. 14236 for Rs. 48.27 Lakhs (General)** ಶೇಕಡಾವಾರು ದ್ವಿಲಕೋಟೆಗಳಲ್ಲಿ ಕೆ.ಟಿ.ಪಿ.ಟಿ. ನಿಯಮಗಳನ್ವಯ, ಅರ್ಹ ಬಿಡ್ಡುದಾರರುಗಳಿಂದ ಟೆಂಡರ್ ಅಹ್ವಾನಿಸಿದ್ದು, ಗುತ್ತಿಗೆದಾರರುಗಳು ಭದ್ರತಾ ಠೇವಣಿಯನ್ನು E-Cash ನಲ್ಲಿ ತುಂಬಿ ತಮ್ಮ ಬಿಡ್ಡುಗಳನ್ನು ದ್ವಿಲಕೋಟೆ ಪದ್ಧತಿಯಲ್ಲಿ ಸಲ್ಲಿಸಬಹುದಾಗಿದೆ. ಮೊದಲ ಲಕೋಟೆಯು ತಾಂತ್ರಿಕ ಬಿಡ್ಡದಾಗಿದ್ದು ಅಗತ್ಯವಿರುವ ದಾಖಲೆಗಳನ್ನು ಒಳಗೊಂಡಿದ್ದು ಪ್ಯಾರಾ 1.1 ರಂತೆ, ಎರಡನೇ ಲಕೋಟೆಯು ಆರ್ಥಿಕ ಬಿಡ್ಡಾಗಿದ್ದು ತಾಂತ್ರಿಕ ಬಿಡ್ಡನಲ್ಲಿ ಅರ್ಹರಾದವರ ಆರ್ಥಿಕ ಬಿಡ್ಡುಗಳನ್ನು ಮಾತ್ರ ತೆರೆಯಲಾಗುವುದು.
1)ಟೆಂಡರ ಡಾಕುಮೆಂಟ್ಸಗಳನ್ನು ವೆಬ್‌ಸೈಟನಲ್ಲಿ ನೋಡಿಕೊಳ್ಳುವ / ಡೌನಲೋಡ ಮಾಡಿಕೊಳ್ಳುವ ದಿನಾಂಕ ಹಾಗೂ ಸ್ವಿಕರಿಸುವ ಕೊನೆಯ **ದಿನಾಂಕ: 10.01.2019 ರಿಂದ 21.01.2019** ಸಾಯಂಕಾಲ 5.00 ಘಂಟೆಯವರೆಗೆ. 2)ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 23.01.2019** ಮುಂಜಾನೆ 11.00 ಘಂಟೆಗೆ. 3)ಆರ್ಥಿಕ ಬಿಡ್ ತೆರೆಯುವ **ದಿನಾಂಕ: 25.01.2019** ಮುಂಜಾನೆ 11.00 ಘಂಟೆಗೆ.
ಟೆಂಡರಗೆ ಸಂಬಂಧಿಸಿದ ಮಾಹಿತಿಗಳನ್ನು ಈ ಕಛೇರಿಯಿಂದ ಕಛೇರಿ ಅವಧಿಯಲ್ಲಿ ಅಥವಾ ಉಳಿದಂತೆ ಟೆಂಡರನಲ್ಲಿ ಯಾವುದೇ ಬದಲಾವಣೆಗಳನ್ನು ಈ ವೆಬ್‌ಸೈಟನ್ನು ಸಂಪರ್ಕಿಸಿ ಪಡೆಯಬಹುದು. http://www.eproc.karnata.gov.in ಸಂಪರ್ಕಿಸಬೇಕಾದ ಕಛೇರಿ ದೂರವಾಣಿ ಸಂಖ್ಯೆ: 08426–281027.
**ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,ಕೃಭಾಜನಿನಿ,ಆಣೆಕಟ್ಟು ವಿಭಾಗ, ಆಲಮಟ್ಟಿ**
ವಾಸಾಸಂಇ/ವಿಜಯಪುರ/ಆರ್.ಓ.ಸಂ.593/ಎಂಸಿಎ.2018–19

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
**VISHVAVANI**, Printed & Published by: **VISHWESHWAR BHAT**, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 080-2860 5544, 2860 0054
Printed MNS Printers TVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : **Vishweshwar Bhat.** ಪ್ರಧಾನ ಸಂಪಾದಕ: **ವಿಶ್ವೇಶ್ವರ ಭಟ್**

CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.

ನಮ್ಮ ಆವೃತ್ತಿಗಳು:
**ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ**
Vol:4, Issue:7